ಮೇಲಿನ ಮೂರು ರಸ್ತೆಗಳು ಸಿಮೆಂಟ್ ಕಾರ್ಖಾನೆಗಳು ಮತ್ತು ಶಹಾಬಾದ್ ಹಾಸುಬಂಡೆ ಖಣಿಗಳಿಂದ ಸುತ್ತುವರಿದಿವೆ. ಸಿಮೆಂಟ್ ಮತ್ತು ಶಹಾಬಾದ್ ಹಾಸುಬಂಡೆಗಳು ಕರ್ನಾಟಕ ಪ್ರಾಂತ್ಯ ಹಾಗೂ ನೆರೆಯ ರಾಜ್ಯ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಗೆ ಈ ರಸ್ತೆಗಳ ಮುಖಾಂತರವೇ ಸಾಗಿಸಬೇಕಾಗಿದೆ. ಆದಕಾರಣ ನಿಬಿಡವಾದ ,ಹಾಗೂ ಭಾರವುಳ್ಳ ವಾಹನಗಳ ಸಂಚಾರದಿಂದ ರಸ್ತೆಗಳ ತಳಹದಿ ಕುಸಿದು ರಸ್ತೆಗಳ ಮೇಲ್ಮೈ ಮೇಲಿಂದ ಮೇಲೆ ಹಾಳಾಗಿ ತಗ್ಗು ದಿನ್ನೆಗಳು ಕಾಣಿಸಿಕೊಳ್ಳುತ್ತಿವೆ. ಇವುಗಳನ್ನು ಮುಚ್ಚಿ ಸಂಚಾರಕ್ಕೆ ಅನುವು ಮಾಡಲು ಲಭ್ಯವಿರುವ ಅನುದಾನದಿಂದ ನಿರ್ವಹಿಸಲಾಗುತ್ತಿಗೆ.

ಉ) ಮಳಖೇಡದಿಂದ ರಿಬ್ಬನ್‌ಪಲ್ಲಿ ರಸ್ತೆಯು ರಾಜ್ಯ ಹೆದ್ದಾರಿ ಸಂಖ್ಯೆ 10ರ ಒಂದು ಭಾಗವಾಗಿದೆ ಹಾಗೂ ಸೇಡಂ ಕೋಡ್ಲಾ ರಸ್ತೆಯು ರಾಜ್ಯ ಹೆದ್ದಾರಿ ಸಂಖ್ಯೆ 15ರ ಒಂದು ಭಾಗವಾಗಿದೆ. ಈ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಮಂಜೂರಾಗಿದ್ದು ಈ ಕೆಲಸಗಳು ಈಗಾಗಲೇ ಪ್ರಾರಂಭವಾಗಿದ್ದು ಪ್ರಗತಿಯಲ್ಲಿವೆ ಹಾಗೂ ಮಳಖೇಡದಿಂದ ರಾಜಶ್ರೀ ಸಿಮೆಂಟ್ಸ್ ಕಾರ್ಖಾನೆ ಕ್ರಾಸಿನ ಅಭಿವೃದ್ಧಿ ಕಾರ್ಯವನ್ನು ಪ್ರತಿ ಶಾಸಕರ ಮತ ಕ್ಷೇತ್ರಕ್ಕೆ ಒದಗಿಸಿದ ಹಣದಲ್ಲಿ ಮಂಜೂರಾಗಿದ್ದು ಈ ಕೆಲಸಕ್ಕೆ ಈಗಾಗಲೇ ಗುತ್ತಿಗೆ ನಿಗದಿಪಡಿಸಲಾಗಿದೆ. ಅಭಿವೃದ್ಧಿ ಕಾರ್ಯದಲ್ಲಿ ಡಾಂಬರೀಕರಣ ಸೇರಿದ್ದರಿಂದ ಕೆಲಸವನ್ನು ಮಳೆಗಾಲದ ನಂತರ ಪ್ರಾರಂಭಿಸಿ ಮುಗಿಸಲಾಗುವುದು.

ರಾಜ್ಯದ ರಾಜಧಾನಿಯ ಕಲಾ ಮಂಟಪಗಳಲ್ಲಿ ಕಲಾ ಪ್ರದರ್ಶನ

2350 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ರಾಜ್ಯದ ರಾಜಧಾನಿಯ ಯವನಿಕಾದಲ್ಲಿ ಸಂಘ ಸಂಸ್ಥೆಗಳ, ಯುವಕ ಮಂಡಲಿಗಳ ಶ್ರೇಷ್ಠ ಪ್ರದರ್ಶನಗಳಿಗೆ ನಗದು ಸಹಿತ ಪ್ರೋತ್ಸಾಹ ನೀಡಿ ಅವಕಾಶ ಮಾಡಿ ಕೊಡಲಾಗುವುದೇ?

ಆ) ಯವನಿಕಾ ಬಿಟ್ಟು ರಾಜಧಾನಿಯ ಉಳಿದ ಯಾವ ಕಲಾ ಮಂಟಪಗಳಲ್ಲಿ ಕಲಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿ ಕೊಡಲಾಗುವುದು (ವಿವರ ನೀಡುವುದು)

ಇ) ಈ ರೀತಿ ಅವಕಾಶ ನೀಡುವುದಾದರೆ ಎಷ್ಟು ಪ್ರದರ್ಶನಗಳಿಗೆ ಮಿತಿಗೊಳಿಸಲಾಗುವುದು ಮತ್ತು ಎಷ್ಟು ಮಂದಿಗೆ ನಗದು ಪ್ರೋತ್ಸಾಹವನ್ನು ನೀಡಲಾಗುವುದು?

ಈ) ಉಡುಪಿ ತಾಲ್ಲೂಕು ಸಾಸ್ತಾನದ ಸವಿನಯ ಯುವಕ ಮಂಡಲವು ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಪ್ರಥಮ ಬಹುಮಾನ ಪಡೆದ ತನ್ನ ನಾಟಕ ಪ್ರದರ್ಶನಕ್ಕೆ ರಾಜಧಾನಿಯಲ್ಲಿ ಅವಕಾಶ ಮಾಡಿಕೊಡುವಂತೆ ಮನವಿ ಸಲ್ಲಿಸಿತ್ತೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಹೌದು.

ಆ) ರವೀಂದ್ರ ಕಲಾಕ್ಷೇತ್ರ.

ಇ) ಆಯವ್ಯಯ ಅವಕಾಶವನ್ನು ಪರಿಶೀಲಿಸಿ ಕಾರ್ಯಕ್ರಮ ನೀಡಲಾಗುತ್ತದೆ.

ಈ) ಹೌದು

ಉ) ನಾಟಕ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ

2011-ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು-ಬೆಳಗಾಂ ರಸ್ತೆ (ಎನ್.ಹೆಚ್-4)ಹೆದ್ದಾರಿಯಲ್ಲಿ ವಾಹನ ಸಂಚಾರ ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಮೇಲ್ಕಂಡ ಹೆದ್ದಾರಿಯನ್ನು ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು? ಹಾಗೂ ಇದಕ್ಕಾಗಿ ಮೀಸಲಾಗಿಟ್ಟ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು?

ಇ) ಮೇಲ್ಕಂಡ ಹೆದ್ದಾರಿಯ ಡಾಂಬರೀಕರಣವು ಕಳಪೆ ಸಾಮಾಗ್ರಿಗಳಿಂದ ನಡೆಯುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಬಂದಿದೆ

ಆ) ರಾಷ್ಟ್ರೀಯ ಹೆದ್ದಾರಿಗಳು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತವೆ. ಬೆಂಗಳೂರು-ಬೆಳಗಾಂ ರಸ್ತೆಯು ಹಂತ ಹಂತವಾಗಿ 4 ಪಥದ ರಸ್ತೆಯನ್ನಾಗಿ ವಿಸ್ತರಿಸಲಾಗುತ್ತಿದೆ. ಕೇಂದ್ರ ಸರ್ಕಾರ ವಾರ್ಷಿಕ ಯೋಜನೆಗಳನ್ನು ಮಂಜೂರು ಮಾಡುತ್ತಾರೆ. ಪ್ರಸಕ್ತ ವಾರ್ಷಿಕ ಯೋಜನೆಯಲ್ಲಿ (1991-92) ಈ ವಿಸ್ತರಣಾ ಕಾರ್ಯ ಸೇರಿರುವುದಿಲ್ಲ. ನೆಲಮಂಗಲದಿಂದ ತುಮಕೂರು ಅಂದರೆ ಕಿ.ಮೀ. 30ರಿಂದ 66 ರವರೆಗೆ ಈಗಿರುವ ದ್ವಿಪಥ ರಸ್ತೆಯು 4 ಪಥವನ್ನಾಗಿ ವಿಸ್ತರಿಸುವ ಬಗ್ಗೆ ಆನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಶಿಫಾರಸ್ಸು ಮಾಡಲಾಗಿದೆ. ಇದಕ್ಕಾಗಿ ಯಾವ ಹಣವನ್ನು ಮೀಸಲಾಗಿಟ್ಟಿಲ್ಲ.

ಬೆಂಗಳೂರು-ಪೂನಾ ರಸ್ತೆಯು ಕಿ.ಮೀ. 10 ರಿಂದ 30 ರವರೆಗೆ 2 ಪಥಗಳ ರಸ್ತೆಯನ್ನು 4 ಪಥಗಳ ರಸ್ತೆಯನ್ನಾಗಿ ವಿಸ್ತರಿಸುವ ಕಾರ್ಯವನ್ನು ಸುಮಾರು 550.00 ಲಕ್ಷ ರೂ.ಗಳ ವೆಚ್ಚದಲ್ಲಿ ಮಾಡಿ ಮುಗಿಸಲಾಗಿದೆ.

ಇ) ಕೇಂದ್ರ ಸರ್ಕಾರದ ವಿಶಿಷ್ಟ ವಿವರಣೆಗಳಿಗೆ ಅನುಗುಣವಾಗಿ ಕೆಲಸ ಮಾಡಲಾಗುತ್ತದೆ. ಕಳಪೆ ಸಾಮಾಗ್ರಿಗಳನ್ನು ಉಪಯೋಗಿಸುತ್ತಿರುವುದಿಲ್ಲ.

ಕುಮುದ್ವತಿ ನದಿಗೆ ಅಡ್ಡಲಾಗಿ ಸೇತುವೆ ಕಟ್ಟುವ ಬಗ್ಗೆ

2078 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಅಗಲಕುಪ್ಪೆ ಮತ್ತು ಹೊಸಹಳ್ಳಿ ಗ್ರಾಮಗಳ ಮಧ್ಯೆ ಕುಮುದ್ವತಿ ನದಿ ಹಳ್ಳಕ್ಕೆ ಸೇತುವೆ ಇಲ್ಲದಿರುವುದರಿಂದ ಆ ಭಾಗದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?